ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 113/2014

(ಚಾ.ಸಾ.3 ಪ್ರಾ.ಸಾ.2 )

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು

ದಿನಾಂಕಃ 23.01.2020.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಉಮೇಶ |
| ತಂದೆಯ/ಗಂಡನ ಹೆಸರು | ಃ | ಮುನಿಶಾಮಪ್ಪ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ | ಃ | ಬೆಂಗಳೂರು. |

**ಮುಖ್ಯವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ನಾನು ಬೆಂಗಳೂರಿನ ವಾಸಿ. ಮೊದಲು ಚಾಲಕ ವೃತ್ತಿ ಮಾಡುತ್ತಿದ್ದೆ ಈಗ ರಿಯಲ್ ಎಸ್ಟೇಟ್ ಬ್ಯುಸಿನೆಸ್ ಮಾಡುತ್ತೇನೆ. ನಾನು ಚಾಲಕ ವೃತ್ತಿ ಮಾಡುತ್ತಿದ್ದಾಗ ಚಾಸಾ-2ರವರ ಪರಿಚಯವಾಗಿತ್ತು, ನನಗೆ ಚಾಸಾ-2ರವರ ಮೂಲಕ ಮೃತ ಶ್ರೀನಿವಾಸ ನಾಯಕರವರ ಪರಿಚಯವಾಗಿತ್ತು, ಶ್ರೀನಿವಾಸ ನಾಯಕ, ನಾಯಕ ಜಾತಿಗೆ ಸೇರಿದವರು. ನನಗೆ ಚಾಸಾ-2 ಮತ್ತು ಶ್ರೀನಿವಾಸರವರು ಮೊದಲು ನಿವೇಶನ ತೆಗೆದುಕೊಳ್ಳುವಂತೆ ಹೇಳಿದ್ದರು ನಂತರ ಜಮೀನು ಖರೀದಿ ಮಾಡುವಂತೆ ಒತ್ತಾಯ ಮಾಡುತ್ತಿದ್ದರು, ನಾನು ಸ್ವಲ್ಪ ದಿನ ಕಳೆಯಲಿ ನಂತರ ನೊಡೋಣ ಎಂದು ಹೇಳಿದ್ದೆ. ಶ್ರೀನಿವಾಸರವರಿಗೆ ಸಾಲ ಇದ್ದ ಕಾರಣ ಅದನ್ನು ತೀರುವಳಿ ಮಾಡಲು ಜಮೀನು ಖರೀದಿಸುವಂತೆ ನನಗೆ ಒತ್ತಾಯ ಮಾಡುತ್ತಿದ್ದರು.

2. ನಾನು ದೊಡ್ಡಬಳ್ಳಾಪುರದಲ್ಲಿರುವ ಎರಡು ಎಕರೆ ಜಮೀನನ್ನು ತೋರಿಸಿ ನೊಡೋಣ ಎಂದು ಹೇಳಿದ್ದೆ. ದಿಃ05.08.2013ರಂದು ನಾನು ದೊಡ್ಡಬಳ್ಳಾಪುರಕ್ಕೆ ಹೋಗಿದ್ದೆ, ದೊಡ್ಡಬಳ್ಳಾಪುರದ ಶ್ರೀನಿವಾಸನಾಯ್ಕರವರ ಊರಿಗೆ ಹೋಗಿದ್ದೆ, ಊರಿನ ಹೆಸರು ನನಗೆ ನೆನಪಿಲ್ಲ, ಚಾಸಾ-2 ಮತ್ತು ಶ್ರೀನಿವಾಸನಾಯ್ಕ ನನಗೆ ಜಮೀನು ತೋರಿಸಿದ್ದರು. ಜಮೀನು

ನೋಡಿಕೊಂಡು ಸಂಜೆ 06.30ರ ಸಮಯಕ್ಕೆ ಬರುತ್ತಿದ್ದಾಗ ಶ್ರೀನಿವಾಸನಾಯ್ಕರವರ ಊರಿನಲ್ಲಿ ಕಾರು ನಿಲ್ಲಿಸಿ ಸ್ವಲ್ಪ ದೂರ ನಡೆಯಬೇಕಾಗಿದ್ದ ಕಾರಣ ನಡೆದುಕೊಂಡು ಬರುತ್ತಿದ್ದೆವು. ನಾವು ಕಾರಿನ ಬಳಿ ಬಂದಾಗ ಶ್ರೀನಿವಾಸನಾಯ್ಕರವರ ಅಕ್ಕ ಅಥವಾ ಅತ್ತೆ ಕಾರಿನ ಬಳಿ ಬಂದಿದ್ದರು. ನಾನು ಕಾರಿನ ಬಳಿ ಬಂದ ಶ್ರೀನಿವಾಸನಾಯ್ಕರವರ ಅಕ್ಕ ಅಥವಾ ಅತ್ತೆಯನ್ನು ಆಗ ನೋಡಿದ್ದೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1ನೇ ಆರೋಪಿ ಶ್ರೀನಿವಾಸನಾಯ್ಕರವರನ್ನು ಏನೋ ಮಾತನಾಡಬೇಕು ಎಂದು ಹೇಳಿ ಕರೆದುಕೊಂಡು ಹೋಗಿದ್ದರು.

3. ಆಕೆ ಶ್ರೀನಿವಾಸನಾಯ್ಕರವರನ್ನು ಕರೆದುಕೊಂಡು ಹೋದ ನಂತರ ಜನಸಂದಣಿ ಹೆಚ್ಚಾಗಿತ್ತು ಆಗ ಒಂದು ಆಟೋ ಬಂದು ಕಾರಿನ ಹಿಂದಿನ ನಿಂತಿತ್ತು. ಶ್ರೀನಿವಾಸನಾಯ್ಕರವರನ್ನು ದೊಣ್ಣೆಯಲ್ಲಿ ಹೊಡದು ಆಟೋದಲ್ಲಿ ಹಾಕಿಕೊಂಡಿದ್ದರು. ನನಗೆ, ನೀವು ಹೋಗದೇ ಇದ್ದರೆ ನಿಮಗೂ ಇದೇ ಗತಿ ಆಗುತ್ತದೆ ಎಂದು ಬೆದರಿಕೆ ಹಾಕಿದ್ದರು. ಕೂಡಲೇ ನಾನು ಕಾರು ಹತ್ತಿ ಬೆಂಗಳೂರಿನ ಕಡೆಗೆ ಬಂದಿದ್ದೆ. ಮೃತ ಶ್ರೀನಿವಾಸನಾಯ್ಕರವರನ್ನು ದೇಹದ ಯಾವ ಯಾವ ಭಾಗಗಳಿಗೆ ಹೊಡೆದಿದ್ದರೋ ನಾನು ನೋಡಿರಲಿಲ್ಲ ಸಾಕ್ಷಿ ಆತನನ್ನು ಹೊಡೆದು ಆಟೋದ ಬಳಿ ಕರೆತಂದಿದ್ದರು ಎಂದು ಮುಂದುವರಿದು ನುಡಿದಿರತ್ತಾರೆ.

4. 1ನೇ ಆರೋಪಿಯೊಂದಿಗೆ ಬೇರೆ ಯಾರು ಸೇರಿದ್ದರೋ ನನಗೆ ಗೊತ್ತಿಲ್ಲ. ನನಗೆ ಬೆದರಿಕೆ ಹಾಕಿದ ಕೂಡಲೇ ನಾನು ಕಾರಿನಲ್ಲಿ ಹೊರಟಿದ್ದೆ. 1ನೇ ಆರೋಪಿಯನ್ನು ಹೊರತುಪಡಿಸಿ ಬೇರೆ ಆರೋಪಿಗಳು ಯಾರು ಎಂದು ನನಗೆ ತಿಳಿದಿಲ್ಲ. ಎಲ್ಲಾ ಆರೋಪಿಗಳು ಶ್ರೀನಿವಾಸನಾಯ್ಕರವರನ್ನು ಹೊಡೆದಿದ್ದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ. ಕಾರಿನ ಹಿಂದೆ ಬಂದು ನಿಂತ ಆಟೋವನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ ಆಟೋ ಸಂಖ್ಯೆ ನನಗೆ ನೆನಪಾಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)

5. <u>**ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**</u> ನಾವು ದೊಡ್ಡಬಳ್ಳಾಪುರದ ಮೃತ ಶ್ರೀನಿವಾಸನಾಯ್ಕರವರ ಕೆಳಗಿನನಾಯಕಂಡ್ರನಹಳ್ಳಿಗೆ ಹೋಗಿದ್ದೆವು. ನಾನು, ಚಾಸಾ-2 , ಮೃತರು ಮತ್ತು ಮತ್ತೊಬ್ಬ ಕುಮಾರ ಎಂಬುವವರು ಕಾರಿನಲ್ಲಿ ಇದ್ದೆವು ಎಂದರೆ ಸರಿ ಸಾಕ್ಷಿ ಮುಂದುವರಿದ ಕುಮಾರ ಕಾರು ಚಾಲಕ ಎಂದು ನುಡಿದಿರುತ್ತಾರೆ. 1ನೇ ಆರೋಪಿ ಮೃತರ ಅತ್ತೆ ಎಂದರೆ ಸರಿ ಸಾಕ್ಷಿ ಮೃತರು 1ನೇ ಆರೋಪಿಯನ್ನು ತನ್ನ ಅಕ್ಕ ಎಂದು ಮೊದಲು ಹೇಳಿದ್ದರು ನಂತರ ಆಕೆ ಆತನ ಅತ್ತೆಯೂ ಸಹ ಎಂದು ಹೇಳಿದ್ದರು ಎಂದು ನುಡಿದಿರುತ್ತಾರೆ.

6. 1ನೇ ಆರೋಪಿಯೊಂದಿಗೆ ಆಟೋದ ಬಳಿ ಇದ್ದ ವಕ್ತಿಗಳು 2ನೇ ಆರೋಪಿ ರವಿ ನಾಯ್ಕ, 3ನೇ ಆರೋಪಿ ಸಂತೋಷ ನಾಯ್ಕ, ಅವರ ಸಂಬಂಧಿ ನೀಲಾಬಾಯಿ, ನಟರಾಜ ನಾಯ್ಕ, ಸುಮಿತ್ರ ಬಾಯಿ, ನಂಜುಂಡಚಾರಿ ಎಂದರೆ ಸರಿ. 1ರಿಂದ 7ನೇ ಆರೋಪಿಗಳು ಮೃತ ಶ್ರೀನಿವಾಸನಾಯ್ಕರವರಿಗೆ ನೀನು ಪತ್ರಿಕೆಯಲ್ಲಿ ಹೀನಾಮಾನವಾಗಿ ಬರೆದು ನಮಗೆ ಅವಮಾನಮಾಡುತ್ತೀಯಾ ನಿನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಧಮಕಿ ಹಾಕಿದ್ದರು ಎಂದರೆ ಗೊತ್ತಿಲ್ಲ, 1ರಿಂದ 7ನೇ ಆರೋಪಿಗಳು ದೊಣ್ಣೆಯಿಂದ ಕೈಗಳಿಂದ ಮೃತ ಶ್ರೀನಿವಾಸನಾಯ್ಕರವರ ಮೈ ಕೈಗೆ ಹಲ್ಲೆ ಮಾಡಿದ್ದರು ಎಂದರೆ ನಾನು ನೋಡಿಲ್ಲ, ಸಾಕ್ಷಿಗೆ ಓದಿ ಹೇಳಲಾದ ಸದರಿ ಭಾಗವನ್ನು ನಿಪಿ-8 ಎಂದು ಗುರುತು ಮಾಡಲಾಯಿತು. ಮೃತರನ್ನು ಕೈ ಕಾಲು ಕಟ್ಟಿ ಆಟೋ ಸಂಖ್ಯೆ ಕೆಎ-43-36-54ರಲ್ಲಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿ ಸಾಕ್ಷಿ ಆಟೋಗೆ ಸಂಬಂಧಿಸಿದ ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-9ರಿಂದ 12 ಎಂದು ಗುರುತು ಮಾಡಲಾಯಿತು.

7. ನಾನು ಪೋಲಿಸರ ಮುಂದೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳೇ ಮೃತರಿಗೆ ಹೊಡೆದಿದ್ದು ಆಟೋದಲ್ಲಿ ಹೋದ ನಂತರ ಮೃತರು ವಾಪಸ್ಸು ಬರದೇ ಇರುವುದರಿಂದ ಆರೋಪಿಗಳ ಮೇಲೆ ನನಗೆ ಅನುಮಾನ ಇದೆ ಅವರನ್ನು ನೋಡಿದರೆ ನಾನು

ಗುರುತಿಸುತ್ತೇನೆ ಎಂದು ಪೋಲಿಸರ ಮುಂದೆ ಈಗ ಓದಿ ಹೇಳಿದ ನಿಪಿ-13ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ.

8. 1ನೇ ಆರೋಪಿಯೊಂದಿಗೆ 2ರಿಂದ 7ನೇ ಆರೋಪಿಗಳು ಮೃತ ಶ್ರೀನಿವಾಸನಾಯ್ಕರವರಿಗೆ ಹಲ್ಲೆ ಮಾಡಿದ್ದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸಾಕ್ಷಿ ನೀಡಿರಬಹುದು 6-7 ವರ್ಷ ಕಳೆದಿರುವುದರಿಂದ ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ನಾನು ಆರೋಪಿತರಿಗೆ ಸಹಾಯ ಮಾಡಲು 2ರಿಂದ 8ನೇ ಆರೋಪಿಗಳನ್ನು ಹಲ್ಲೆ ಮಾಡುವಾಗ ನೋಡಿದ್ದರೂ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. **ಪಾಟೀ ಸವಾಲುಃ** ಆರೋಪಿ ಪರ ವಕೀಲರು ಕಲಂ 231(2) ಸಿಆರ್‌ಪಿಸಿ ಅನ್ವಯ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.